# Research maGma

(An International Multidisciplinary Journal)

**UGC Approved Journal No: 63465**

Editor in Chief
Dr. Sanjay Kumar Singh

Associate Editor
Dr. T. Manichander

# Research maGma

Research maGma is a multidisciplinary research journal, published monthly in all Language. All research papers submitted to the journal will be double - blind peer reviewed .


## Our Editorial Board

Dr Anil Kumar S.
Dr. Gatade Dattatraya Ganapati
Dr. Prashant Thote
Dr. Deepa Viswam
Dr. Anamika Kumari
Smt. B.S.Gunarekha
Dr. P. Samuel
Dr. Pargat Singh Garcha
Dr. M. Abdul Jamal
Dr. Tapas Pal
Dr. Gardi Balu Pandurang
Dr. Dnyaneshwar Babulal Shirode
Dr. Ashokkumar B. Surapur
Dr. N. Sasikumar
Dr. Saykar Satish Govind
Dr. A. Paul Albert
Dr. Atul Hansraj Salunke
Mr. Sanjeev Kumar Mishra
Dr. Neeta Sukhendrapal Singh
Dr. Kispotta Seraphinus
Dr. Santosh Kumar Behera
Dr. Sandhya Ayaskar
Dr. S. Aravind
Dr. Sandeep V. Binorkar
Dr. Raval Sandeep Krishnat
Dr. Mahesh Nawria
Dr. Tamanna Kaushal
Dr. Deepak B. Nale
Dr. Ram Chander
Dr. Sudhir Kumar Jena
Dr. S Maxwell Lyngdoh
Dr. Bhed Pal Gangwar
Dr. Shaikh Fahemeeda
Dr. Deshai Rajesh Bhaurao

Research maGma
An International Multidisciplinary Journal
ISSN- 2456-7078 IMPACT FACTOR- 4.520
VOL-1, ISSUE-10, DEC-2017

# ಸಕಲೇಶಪುರದಲ್ಲಿ ಸುಗ್ಗಿ ಸಂಭ್ರಮ

[೧]ರವಿ ಪ್ರಕಾಶ್, [೨]ಡಾ. ಜಗದೀಶ್‌ಬಾಬು ಬಿ. ವಿ.
[೧]ಸಂಶೋಧನಾ ವಿದ್ಯಾರ್ಥಿ, ರುಕ್ಮಿಣಿ ನಾಲೆಡ್ಜ್ ಪಾರ್ಕ್, ಕಟ್ಟಿಗೇನಹಳ್ಳಿ, ಯಲಹಂಕ, ಬೆಂಗಳೂರು–೫೬೦೦೬೪.
[೨]ಮಾರ್ಗದರ್ಶಕರು, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಕನ್ನಡ ವಿಭಾಗ, ರೇವ ನಿರ್ವಹಣಾ ಪದವಿ ಕಾಲೇಜು, ಗಂಗಾನಗರ, ಬೆಂಗಳೂರು–೨೪.

ಮಾನವನ ಸಂಸ್ಕೃತಿಯ ಮೂಲ ನೆಲೆಯನ್ನು ಹೊತ್ತು ನಿಂತಿರುವ ಜನಪದ ಸಾಹಿತ್ಯ ವ್ಯಕ್ತಿಯ ಮಾನಸಿಕ ಮತ್ತು ಬೌದ್ಧಿಕ ಬೆಳವಣಿಗೆ ನಡೆದು ಬಂದ ದಾರಿಯನ್ನು ನಿಚ್ಚಳವಾಗಿ ಗುರುತಿಸುತ್ತದೆ. ಜಾನಪದದ ಅಧ್ಯಯನದಲ್ಲಿ ಜನಪದರ ನಂಬಿಕೆಗಳಿಗೆ ಪ್ರಮುಖವಾದ ಸ್ಥಾನವಿದೆ. ಏಕೆಂದರೆ ನಂಬಿಕೆಗಳು ಮಾನವ ಸಂಸ್ಕೃತಿಯ ಅವಿಭಾಜ್ಯ ಅಂಗಗಳಾಗಿವೆ. ಮಾನವ ಸಂಸ್ಕೃತಿಯ ಇತಿಹಾಸದ ಬೇರುಗಳು ಈ ನಂಬಿಕೆಗಳಲ್ಲಿವೆ.

ಐತಿಹಾಸಿಕ, ಸಾಂಸ್ಕೃತಿಕ ಶಿಲ್ಪಕಲಾ ಪರಂಪರೆ ಹೊಂದಿರುವ ಹಾಸನ ಜಿಲ್ಲೆಯ ಸಕಲೇಶಪುರದಲ್ಲಿ ಪರಂಪರಾನುಗತವಾಗಿ ಆಚರಿಸಿಕೊಂಡು ಬರುತ್ತಿರುವ ಕೆಲವು ಜಾನಪದ ನಂಬಿಕೆಗಳಿಂದ ಈ ತಾಲ್ಲೂಕು ಹೆಚ್ಚು ಮಾನ್ಯತೆ ಪಡೆದಿದೆ. ಮೂಲ ನಿವಾಸಿಗಳಿಂದ ಹಿಡಿದು ಚರಿತ್ರೆಯ ಕಾಲದುದ್ದಕ್ಕೂ ಜನರ ಪದಕೋಶದಿಂದ ಹುಟ್ಟಿದ ಆಚರಣೆಗಳು ತಲೆಯಿಂದ ತಲೆಗೆ ಹರಿದು ಬಂದು ಅನೇಕ ಸಂಸ್ಕೃತಿಗಳ ಗರ್ಭಕಟ್ಟಿ ನಿಂತಿವೆ. ಪಶ್ಚಿಮ ಘಟ್ಟದ ಕಣಿವೆ ಪ್ರದೇಶಗಳಲ್ಲಿ ಕಂಡುಬಂದ ಆದಿವಾಸಿಗಳ(ಮಲೆಕುಡಿ ಮತ್ತು ಹಸಲರು) ನೆಲೆಗಳಿಗೆ ಇಲ್ಲಿಯ ಜನಗಳು ಜನಪದರ ಭಾಷೆಯಲ್ಲಿ ಈ ರೀತಿಯಲ್ಲಿ ಹೇಳುತ್ತಾರೆ. ಕಲ್ಲುಗಳಿಗೆ 'ಕೋಲೆಕಲ್ಲುಗಳೆಂತಲೂ' ಕರೆಯುತ್ತಾರೆ. ಅದರಲ್ಲೂ ಈ ಮಲೆನಾಡಿನಲ್ಲಿ ಹೆಸರಿಸಲೇ ಬೇಕಾದ ಪ್ರಸಿದ್ಧ ಜಾನಪದ ಸಂಸ್ಕೃತಿಯನ್ನು ಬಿಂಬಿಸುವ ಸುಗ್ಗಿ ಹಬ್ಬವು ಪ್ರಸಿದ್ಧಿ ಹೊಂದಿದೆ. ಈ ನಾಡನ್ನಾಳಿದ "ಕೃಷ್ಣಪ್ಪನಾಯಕನಿಂದ ನಾಂದಿ ಹಾಡಿಸಿಕೊಂಡ ಈ ತರದ ಸುಗ್ಗಿ ಹಬ್ಬವು ಒಟ್ಟು ಗ್ರಾಮಾಂತರ ಬದುಕಿನ ಜೀವಧ್ವನಿಯಾಗಿ ನಿಲ್ಲುತ್ತದೆ. ಸುಗ್ಗಿಯ ಕಾಲದಲ್ಲಿ ಅಂದರೆ ರೈತರು ಹುಲ್ಲು ಒಕ್ಕುವ ಕಾಲ(ಫೆಬ್ರವರಿ–ಮಾರ್ಚ್) ದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುವುದು. ಆಯಾ ಗ್ರಾಮಗಳಲ್ಲಿ 'ಸುಗ್ಗಿ ದೇವರು' ಎಂಬ ಹೆಸರಿನಿಂದ ಕರೆಯುವ ದೇವರ ಗುಡಿಗೆ 'ದೇವಿರಮ್ಮ' ಎಂಬ ಚರಿತ್ರೆಕಾಲದಿಂದ ಪ್ರಸಿದ್ಧವಾದ ದೇವತೆಯ ದೇವಾಲಯಗಳಿಗೆ ವರ್ಷಕ್ಕೊಂದು ಬಾರಿ ೨ ರಿಂದ ೧೨ ದಿನಗಳವರೆಗೆ ಅಲಂಕರಿಸಿ ಹಬ್ಬವನ್ನು ಮಾಡುತ್ತಾರೆ.

ಸಾಮಾನ್ಯವಾಗಿ ರಾತ್ರಿ ಊಟ ಆದ ನಂತರ ನೃತ್ಯ ಆರಂಭವಾಗುತ್ತದೆ. ತಮಟೆ ವಾದ್ಯಗಾರರು ನೆಲ್ಲು ಹುಲ್ಲಿನಿಂದ ತಮಟೆ ಕಾಯಿಸಿ ಊರಿಗೆಲ್ಲ ಕೇಳುವಂತೆ ಜೋರಾಗಿ ಬಡಿಯುತ್ತಾರೆ. ಈ ಶಬ್ದ ಕೇಳಿದೊಡನೆ ನೃತ್ಯದಲ್ಲಿ ಭಾಗವಹಿಸುವ ಕಲಾವಿದರು ಗೆಜ್ಜೆಯ ಸರದೊಡನೆ ರಂಗಸ್ಥಳಕ್ಕೆ ಬರುತ್ತಾರೆ. ಸುಗ್ಗಿ ಕುಣಿತದಲ್ಲಿ ತಮಟೆ ವಾದ್ಯಗಾರನ ಪಾತ್ರ ಅತಿ ಮುಖ್ಯವಾದುದು. ಈತ ತನ್ನ ಗತ್ತಿನಲ್ಲಿ ತಮಟೆ ಬಾರಿಸುತ್ತಿದ್ದಂತೆ ಅದಕ್ಕೆ ತಕ್ಕ ಹಾಗೆ ಕಲಾವಿದರು ಕುಣಿತ ಆರಂಭಿಸುತ್ತಾರೆ. ಅನೇಕ ಬಗೆಯ ಕುಣಿತ ಸುಮಾರು ಸರಿಹೊತ್ತಿನ ತನಕ ಸಾಗುತ್ತದೆ. ಕೊನೆಯಲ್ಲಿ ತಮಟೆ ವಾದ್ಯಗಾರನ ಬಡಿತದ ಸೂಚನೆಯೊಂದಿಗೆ ನೃತ್ಯ ಕೊನೆಗೊಳ್ಳುತ್ತದೆ.

ಸುಗ್ಗಿಯು ಒಂದೊಂದು ಗ್ರಾಮದಲ್ಲಿ ಆ ಗ್ರಾಮದ ಪದ್ಧತಿಗನುಗುಣವಾಗಿ ನಡೆಯುತ್ತದೆ. ವೀರಕಥೆಯನ್ನು ಹಾಡುವವರು ಇರುತ್ತಾರೆ. ವೀರಕಥೆಯ ಹಾಡು ಮುಗಿಯುವಷ್ಟರಲ್ಲಿ ಊರಿನ ವೀರಗಲ್ಲಿನ ಬಳ ಬರುತ್ತಾರೆ. ತಂಡದಲ್ಲಿ ಮೊದಲು ಯಾರು ವೀರಗಲ್ಲಿಗೆ ವಂದಿಸುತ್ತಾನೊ ಅವನೇ ಆ ವರ್ಷದ ವೀರನೆಂದು ಸಾರಲಾಗುತ್ತದೆ. ಕುಣಿತದಲ್ಲಿ ಐದು ದಿನಗಳು ಆವರಿಸುವುದನ್ನು "ಹಿರೆ ಸುಗ್ಗಿ" ಎನ್ನುತ್ತಾರೆ. ಸಾಮಾನ್ಯ ವೇಷದಲ್ಲಿ ಆಚರಿಸುವುದನ್ನು "ಕಿರೇ ಸುಗ್ಗಿ" ಎನ್ನುತ್ತಾರೆ. ಇನ್ನು ಕೆಲವು ಕಡೆಗಳಲ್ಲಿ ಕೈಯಲ್ಲಿ ಪಂಜನ್ನು ಹಿಡಿದು ಕುಣಿಯುವುದು ವಾಡಿಕೆಯಾಗಿದೆ.

ಸುಗ್ಗಿ ಪ್ರಾರಂಭವಾಗುವುದಕ್ಕೂ ಮೊದಲು ಸುಗ್ಗಿಯ ಹಾಡನ್ನು ಹೇಳಿ ನಂತರ ಪೂಜೆ ಪುರಸ್ಕಾರಗಳು ನಡೆಯುವುದು ವಾಡಿಕೆಯಾಗಿದೆ. ಆ "ಸುಗ್ಗಿಯ ಹಾಡು" ಎಂದರೆ

ಹಸಿ ಕಡಿ ಬೇಡಿ
ಒಣಗು ಮುರಿ ಬೇಡಿ
ಹಂಚ ಎತ್ತ ಬೇಡಿ
ಅರಳು ಹುರಿ ಬೇಡಿ
ಒಳಗಿದ್ದೋರು ಒಳಗೆ
ಹೊರಗಿದ್ದೋರು ಹೊರಗೆ
ಇದು ನಮ್ಮೂರ ಸುಗ್ಗಮ್ಮನ ಸಾರೋ ಸಾರು ॥

ಸುಗ್ಗಮ್ಮ ಬಂದಾಳೆ
ಮಳೆ ಬೆಳೆದು ತಂದಾಳೆ
ಜನ ಜಾನುವಾರು ಎಲ್ಲಾನು ಹರಸಿ
ದೊಡರಿನ ಬೆಳಕಲ್ಲಿ ನಗು ನಗುತಾ ನಿಂತಾಳು ॥
ಹೊನ್ನು ಸುಗ್ಗೀಯಾಗೆ
ಹೊನ್ನಾರು ಹಿಡಿದಾರೆ
ಹೊನ್ನಾ ಬಿತ್ತಾರೆ
ಹೊನ್ನಿನ ಬೆಳೆಯ ಬೆಳೆದಾರೆ ॥
ಮಲ್ಲು ಸುಗ್ಗಿಯಾಗೆ
ನಮ್ಮೂರ ಮಲ್ಲರೆಲ್ಲ
ಮಲ್ಲು ಬೆಳೆಗ್ಸಾರೆ ಹಾಡಿ ಕುಣಿದಾರೆ ॥
ಬಿಲ್ಲು ಸುಗ್ಗಿಯಾಗೆ
ಸುಗ್ಗಿಯ ಕತ್ತೀಯ ಸೊಂಟಾಕೆ ಸಿಕ್ಕೈಸಿ
ಬೆಳ್ಳಿ ಕೋಲೆತ್ತಿ ಪಳ್ಳ ಪಳಾನೆ ಬೆಳಗೀಸಿ
ಹೂವಿನ ಬಿಲ್ಲ ಹಿಡಿದು ಹೈದಾರು ಹಿಗ್ಗುತಾ ಕುಣಿದಾರಲ್ಲೋ
ಸುಗ್ಗೀಯ ಕಟ್ಟೇಯ ತೂಗು ಉಯ್ಯಾಲೆಯಲಿ
ತಾಯಿ ಸುಗ್ಗಿಮ್ಮ ॥

### ಉದೇವಾರದ ದೇವಿರಮ್ಮನ ಸುಗ್ಗಿ:

ಈ ದೇವಾಲಯವು ಹೊಯ್ಸಳ ಶಿಲ್ಪ ಕಲಾ ವೈಭವದ ಪ್ರತಿರೂಪದಂತೆ ಇದೆ. ಗ್ರಾಮೀಣ ಪರಿಸರದಲ್ಲಿರುವ ಈ ದೇವಿಯ ಉತ್ಸವ ವರ್ಷದಲ್ಲಿ ಎರಡು ಬಾರಿ ನಡೆಯುತ್ತದೆ. ದೀಪಾವಳಿ ಸಂದರ್ಭದಲ್ಲಿ ದೇವಿಗೆ ೧೦೧ ಬಗೆಯ ಉಡುಗೆಗಳನ್ನು ತೊಡಿಸಿ, ಇಡೀ ರಾತ್ರಿ ಸುಗ್ಗಿಯ ಹಾಡುಗಳೊಂದಿಗೆ ಊರಿನ ಜನರು ಉತ್ಸವವನ್ನು ಮಾಡುತ್ತಾರೆ. ಈ ಸಂದರ್ಭದಲ್ಲಿ ಜಾನಪದ ಕಲೆಗಳಾದ ಚೋಮನ ಕುಣಿತ, ಡೊಳ್ಳು ಕುಣಿತಗಳು ನಡೆಯುವುದು ಇಲ್ಲಿಯ ವಿಶೇಷವಾಗಿದೆ.

### ಹಾಡ್ಲಹಳ್ಳಿ ಸುಗ್ಗಿ:

ಮಲೆನಾಡಿನಲ್ಲಿ ವಿಶೇಷ ಮತ್ತು ಅಪರೂಪದ ಜಾನಪದ ಜಾತ್ರೆಗಳು ಕೆಲವು ಜರುಗುತ್ತವೆ. ಇದರಲ್ಲಿ ವಿಶಿಷ್ಟವಾದುದು 'ಹಾಡ್ಲಹಳ್ಳಿ ಸುಗ್ಗಿ ಹಬ್ಬ'. ಇಲ್ಲಿ ಒಂದು ದಿನ ಹೆಣ್ಣು ಮಕ್ಕಳು ಮಾತ್ರ ಒಟ್ಟಾಗಿ ಸೇರಿ ಪಂಜಿನ ಬೆಳಕಲ್ಲಿ ಸುಗ್ಗಿ ಕುಣಿತವನ್ನು ಆಚರಿಸುತ್ತಾರೆ. ಗಂಡಸರ ಸುಳಿವೆ ಇಲ್ಲದೆ ಈ ಕುಣಿತದಲ್ಲಿ ತಾಳ, ಲಯ, ಗತಿಯಲ್ಲಿ ಕೋಲನ್ನು ಹಿಡಿದು ರಾತ್ರಿಯೆಲ್ಲಾ

ಹಾಡುಗಳನ್ನು ಹಾಡುತ್ತಾ ಕುಣಿಯುತ್ತಾರೆ. ಒಂದು ವೇಳೆ ಗಂಡಸರು ಇದನ್ನು ನೋಡಿದರೆ ಸಾವು ಬರುವುದು ಎಂದು ಹೆದರಿ ಗಂಡಸರು ನೋಡಲು ಬರುವುದಿಲ್ಲ ಎಂಬುದು ಜನಪದರ ನಂಬಿಕೆಯಾಗಿ ಇಂದಿಗೂ ಕೂಡ ಮುಂದುವರಿದು ಕೊಂಡು ಹೋಗುತ್ತಿದೆ.

### ಬೊಮ್ಮನಕೆರೆಯ ಸುಗ್ಗಿ:

ಈ ಊರಿನಲ್ಲಿ ಮೂರು ವರ್ಷಗಳಿಗೊಮ್ಮೆ ನಡೆಯುವ ಬಸವಣ್ಣನ ಜಾತ್ರೆ ತುಂಬ ವಿಶೇಷತೆಯಿಂದ ಕೂಡಿದೆ. ಇದನ್ನು 'ಸುಗ್ಗಿ ಜಾತ್ರೆ' ಎಂದೂ ಕರೆಯುತ್ತಾರೆ. ಸುಗ್ಗಿ ಜಾತ್ರೆ ಮಾಡುವಾಗ ಆ ಊರಿನ ಪ್ರತಿ ಮನೆಯಲ್ಲಿ ಸಾರಿಗೆ ಒಗ್ಗರಣೆ ಹಾಕುವಂತಿಲ್ಲ. ಕೊನೆಯ ದಿನ ಸಂಗ್ರಹಿಸಿದ ಹಣದಿಂದ ಒಂದೆಡೆ ಊರಿನ ಜನರೆಲ್ಲ ಸೇರಿ ಅಡುಗೆ ಮಾಡಿ ತಿನ್ನುವುದು ಇಲ್ಲಿಯ ವೈಶಿಷ್ಟತೆ.

### ಐಗೂರಿನ ದೇವಿರಮ್ಮ ಸುಗ್ಗಿ:

"ಬಿಲ್ಲು ಬರುತಾವೆ ಬಿಡರವ್ವ ಬೀದಿಯಾ, ಬಿಲ್ಲಿನ ಹಿಂದೆ ಕಳಸೆದ್ದು ಬರತಾವೆ: ಸಭೆಯೆಲ್ಲಾ ಕೈಯ ಮುಗಿದಾರು" ಎಂದು ಜಾನಪದರು ಹಾಡಿದಂತೆ ನಿನ್ನ ದರ್ಶನ ಮಾತ್ರದಿಂದ ಪುಳಕಿತರಾಗುವ ನಿನ್ನ ಭಕ್ತರಿಗೆ ಉಗಾದಿ ಹಬ್ಬವಾದ ನಂತರ ೭ನೇ ದಿನಕ್ಕೆ ಇಲ್ಲಿನ ಸುಗ್ಗಿಯ ದಿನದ ಆಚರಣೆಯನ್ನು ಮಾಡುವುದು ಇವತ್ತಿಗೂ ರೂಢಿಯಲ್ಲಿದೆ.

ಸುಗ್ಗಿಯ ಕಟ್ಟೆಯ ಬಳಿ ಹಸಿರು ಚಪ್ಪರದ ನಡುವೆ ಉತ್ಸವದ ಮೂರ್ತಿಗೆ ಉಡುಗೆ, ತೊಡುಗೆ, ಒಡವೆ, ಛತ್ರಿ, ಚಾಮರಗಳು, ಹೂವಿನ ಅಲಂಕಾರಗಳು, ಕಣಿಗಲೆ ಹೂವಿನಿಂದ ಸುತ್ತು ದಂಡೆಯನ್ನು ಮಾಡುತ್ತಾರೆ. ಸೀರೆಯನ್ನು ಸಣ್ಣ ನೆರಿಗೆ ಮಾಡಿ ಧರಿಸುತ್ತಾರೆ. ಅದರ ಮೇಲೆ ಹೊಳೆಯುವ ಚಿನ್ನದ ಆಭರಣಗಳು, ಅದರ ನಡುವೆ ಒಂಟಿಳೆಯ ಸಂಪಿಗೆ ಹೂವಿನ ಹಾರಗಳನ್ನು ಹಾಕುತ್ತಾರೆ. ಅದನ್ನು 'ಸರದಂಡೆ' ಎನ್ನುತ್ತಾರೆ. ದಪ್ಪವಾಗಿ ಓರಣವಾಗಿ ಮುಖಕ್ಕೆ ಚೌಕಾಕಾರವಾಗಿ ಸಂಪಿಗೆ ಹೂವಿನಿಂದ ಅಲಂಕರಿಸಿರುತ್ತಾರೆ.

ಸುಗ್ಗಿ ಹಬ್ಬ ಮಾಡುವ ಮೊದಲು ಹಸಿರು ಮುರಿಯಬಾರದು, ಎಣ್ಣೆ ಕಾಯಿಸಿ ಕರಿಯಬಾರದು, ರೊಟ್ಟಿ ಹಂಚು ಕಾಯಿಸಬಾರದು, ಮೆಣಸಿನ ಕಾಯಿ ಸುಡಬಾರದು, ಬಾಣಲೆಯಲ್ಲಿ ಹುರಿಯಬಾರದು ಎಂಬ ಕಟ್ಟಳೆಗಳಿವೆ. ಇದನ್ನು ಕಟ್ಟು ಕಟ್ಟಳೆ ಸಾರು ಎಂದು ಹೇಳುತ್ತಾರೆ. ಮೊದಲ ದಿನ ಉತ್ಸವದ ದಿನ, ಕಟ್ಟಳೆ ಸಾರುವುದು. ಎರಡನೇಯ ದಿನ ಹೊನ್ನಾರು ಸುಗ್ಗಿ ಎಂದರೆ ಬಿಳಿ ಬಟ್ಟೆಯ ಮೇಲೆ ನವಧಾನ್ಯಗಳನ್ನು ಹೊಸದಾಗಿ ತಯಾರಿಸಿದ ಸಣ್ಣ ನೇಗಿಲು ಕೂರಿಗೆಯಿಂದ ಬಿತ್ತುತ್ತಾರೆ. ಮೂರನೆ ದಿನ 'ಬಿಲ್ಲು ಸುಗ್ಗಿ' ಎಂದರೆ ಹೂ ಕಟ್ಟಿ ಅಲಂಕರಿಸಿದ ಬಿಲ್ಲಿನೊಡನೆ ಬರುತ್ತಾರೆ. ಮಲ್ಲು ಬೆಳಗುವುದು ಎಂದರೆ ಒಣಗಿದ ಎಲೆ ತರಗುಗಳನ್ನು ದೀಪದಿಂದ ಹಚ್ಚಿಕೊಂಡು ಕಟ್ಟೆಯ ಸುತ್ತ ತಿರುಗಿಸುತ್ತಾ ಬೆಳಗುವುದು. ನಾಲ್ಕನೆ ದಿನ ನೇಗಿಲು ತೆಗೆದುಕೊಂಡು ಹೋಗಿ ಹೊಳೆಯಲ್ಲಿ ಗಂಗಾ ಸ್ನಾನ ಮಾಡಿಸಿ ಆನಂದ ಪಡುತ್ತಿದ್ದರು. ಐದನೆ ದಿನ ಹಗಲು ಸುಗ್ಗಿ. ಅಂದು ಹಗಲು ನಡೆಯುತ್ತಿದ್ದ ಜಾತ್ರೆ, ಅಂಗಡಿ ಎಲ್ಲಾ ಇದ್ದು, ಹಣ್ಣು ತುಪ್ಪದ ನೈವೇದ್ಯದೊಡನೆ ಸುಗ್ಗಿಯನ್ನು ಮುಗಿಸುತ್ತಾರೆ.

'ಹಾನುಬಾಳು ಸುಗ್ಗಿ ಹಬ್ಬದಲ್ಲಿ' ಕಡ್ಡಾಯವಾಗಿ ಗಂಡಸರು ಕುಣಿಯಲೇಬೇಕು. ಕೊರಗ ಕುಣಿತ, ವೀರಗಾಸೆ ಮೊದಲಾದ ಕುಣಿತಗಳು ಈ ಸಮಯದಲ್ಲಿ ಇರುತ್ತವೆ. ಹನ್ನೆರಡು ದಿನ ಈ ಹಬ್ಬ ನಡೆಯುವುದು.

ಸಕಲೇಶಪುರದ ಕೆಲವೊಂದು ಗ್ರಾಮಗಳಲ್ಲಿ 'ಸುಗ್ಗಿ ಹಬ್ಬವು' ನವರಾತ್ರಿಯಂದು ನಡೆಯುವುದು. ಅಂದು ಕೆಂಡೋತ್ಸವ, ಪಂಜು, ದೀವಟಿಗೆಗಳನ್ನು ಹಿಡಿದು ಕುಣಿಯುವುದು, ಹೂವಿನ ಕೋಲು, ಹೂವಿನ ಚಂಡಿನ ಕೋಲು, ವಸ್ತ್ರಾಲಂಕಾರ, ವಾದ್ಯಗೋಷ್ಠಿ, ಕತ್ತಿವರಸೆಗಳ ಕಲಾ ಪ್ರದರ್ಶನಗಳೊಂದಿಗೆ ಗ್ರಾಮ ದೇವತೆಗಳು ಈ ಸಂದರ್ಭದಲ್ಲಿ ಒಬ್ಬೊಬ್ಬರ ಮೈಯಲ್ಲಿ ಬರುವುದು ಇತ್ಯಾದಿ ಸಂಸ್ಕೃತಿ ಜಾನಪದಗಳ ಮಿಶ್ರಣಗೊಂಡ ಹಬ್ಬ ಇದಾಗಿದೆ. ಮಲೆನಾಡಿನ ಸೋಮನ ಕುಣಿತವಾಗಲಿ, ಸುಗ್ಗಿಯ ಕುಣಿತವಾಗಲಿ ಜಾನಪದ ಸಂಸ್ಕೃತಿಯಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದುಕೊಂಡಿವೆ. ಈ ತಾಲ್ಲೂಕಿನಲ್ಲಿ ನಡೆಯುವ ಪ್ರತಿಯೊಂದು ಜಾತ್ರೆಗಳಿಗೂ ತನ್ನದೆ ಆದ ಊರಿನ ಸಂಸ್ಕೃತಿ, ಊರಿನ ಹೆಗ್ಗಳಿಕೆ, ನಂಬಿಕೆಗಳು ಹೆಪ್ಪುಗಟ್ಟಿರುತ್ತವೆ. ಇದು ಜನಪದರ ಬದುಕಿನ ಜೀವಧ್ವನಿಯಾಗಿದೆ ಎಂದು ಹೇಳಬಹುದು. ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಈ ವಕ್ತೃಗಳನ್ನು ಸಂಗ್ರಹಿಸಿರುತ್ತೇನೆ.

### ಪರಾಮರ್ಶನ ಗ್ರಂಥಸೂಚಿ :


*.ಸಿದ್ಧಲಿಂಗಯ್ಯ–

ಗ್ರಾಮದೇವತೆಗಳು,ಮೂಲ ಭಾರತಿ ಪ್ರಕಾಶನ, ಬೆಂಗಳೂರು:೧೯೯೭.

*.ಹಿರಿಯಣ್ಣ ಅಂಬಳಿಕೆ–

ಜಾನಪದ ಲೋಚನ, ಪ್ರಜ್ವಲ ಪ್ರಕಾಶನ,೧೪೩/ಎ,೧೫ನೇ ತಿರುವು, ಅನಿಕೇತನ ರಸ್ತೆ, ಕುವೆಂಪುನಗರ, ಮೈಸೂರು:೧೯೯೪

*.ಗುರುಮೂರ್ತಿ.ಕೆ.ಜಿ–
ಜಾನಪದ ರೀತಿ ನೀತಿಗಳು, ಕರ್ನಾಟಕ ಜಾನಪದ ಪ್ರಸಾರ ನಿಧಿ, ಬೆಂಗಳೂರು:೧೯೮೧.

೫.ಗುರುಮೂರ್ತಿ.ಕೆ.ಜಿ–
ಜನಪದ ಸಮಾಜ ಮತ್ತು ಸಂಸ್ಕೃತಿ, ನಿರ್ದೇಶಕರು, ಪಬ್ಲಿಕೇಷನ್ ಅಂಡ್ ಎಕ್ಸ್ ಟೆನ್ಸನ್ ಸರ್ವಿಸ್, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ:೧೯೭೯.

*.ಚಂದ್ರಶೇಕರ್.ಸಿ.ಆರ್–
ಸಾಮಾಜಿಕ ನಂಬಿಕೆಗಳು ಮತ್ತು ಮಾನಸಿಕ ಆರೋಗ್ಯ, ಬೆಂಗಳೂರು:೧೯೯೪.

*.ಹಿರಿಯಣ್ಣ ಅಂಬಳಕೆ–
ಜಾನಪದ ವಿವಕ್ಷೆ, ಪ್ರಜ್ವಲ ಪ್ರಕಾಶನ, ಮೈಸೂರು:೧೯೮೬.

*. ರಾಜೇಂದ್ರ ಡಿ,ಕೆ–
ಜಾನಪದ ಸಂಚಯ, ಸ್ಮಾರಕ ಗ್ರಂಥಮಾಲೆ, ಮೈಸೂರು:೧೯೭೨.

*.ಜಿ.ವಿ. ದಾಸೇಗೌಡ–
ನಮ್ಮ ಜನಪದ ನಂಬಿಕೆಗಳು:೧೯೭೩ ಮೈಸೂರು ವಿ.ವಿ. ಮೈಸೂರು.

*.ಗುರುಮೂರ್ತಿ.ಕೆ.ಜಿ–
ಜನಪದ ಸಮಾಜ ಮತ್ತು ಸಂಸ್ಕೃತಿ, ನಿರ್ದೇಶಕರು, ಪಬ್ಲಿಕೇಷನ್ ಅಂಡ್ ಎಕ್ಸ್ ಟೆನ್ಸನ್ ಸರ್ವಿಸ್, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ:೧೯೭೯.

*. ರಾಜೇಂದ್ರ ಡಿ,ಕೆ–
ಜಾನಪದ ಸಂಚಯ, ಸ್ಮಾರಕ ಗ್ರಂಥಮಾಲೆ, ಮೈಸೂರು:೧೯೭೨.ಸಸಸಸ